ಶ್ರೀ ಎಸ್. ಕರಿಯಪ್ಪ.—ಗ್ರೆಡೇಷ್ಟಲಿಸ್ಟ್ ತಯಾರು ಮಾಡಿದ್ದೀರಿ. ಇದು ಯಾವಾಗ ಮಾಡಿದ್ದು ?

ಶ್ರೀ ಎಚ್. ಎಸ್. ರುದ್ರಪ್ಪ.—ಮೊದಲೇ ಈ ಗ್ರೆಡೇಷ್ಟಲಿಸ್ಟ್ ತಯಾರಾಗಿತ್ತು, ಇದು ಪ್ರೊವಿಜನಲ್ ಇನ್ನೂ ಪೂರ್ತಿ ಆಗಿಲ್ಲ.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ಇಲ್ಲಿ ಕೊಟ್ಟಿರುವುದು ಕರಾರುವಾಕ್ಕಲ್ಲ, ಬದಲಾವಣೆ ಮಾಡುವುದಕ್ಕೆ ಅವಕಾಶವಿದೆ ಎಂದು ತಿಳಿದುಕೊಳ್ಳೋಣವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಇದು ಪ್ರೊವಿಜನಲ್ ಎಂದು ನಾನು ಹೇಳಿದೆನಲ್ಲಾ.

ಶ್ರೀ ಎಸ್. ಕರಿಯಪ್ಪ.—ಇಲ್ಲಿ ಕೊಟ್ಟಿರತಕ್ಕ ಪಟ್ಟಿಯಲ್ಲಿ ಮೀನಿನ ಇಲಾಖೆಗೆ ಸಂಬಂಧಪಟ್ಟಹಾಗೆ ಹೆಚ್ಚು ವಿದ್ಯಾರ್ಹತೆಯನ್ನು ಪಡೆದಿರುವವರು ಯಾರು ?

ಶ್ರೀ ಎಚ್. ಎಸ್. ರುದ್ರಪ್ಪ.—ಕ್ವಾಲಿಫಿಕೇಷ್ಟ್ ಮತ್ತು ಅವರು ಅಭ್ಯಾಸಮಾಡಿದಂಥ ವಿಷಯ ತಿಳಿಸಿದ್ದೇವೆ. ಆದ್ದರಿಂದ ತಾವೇ ಅದನ್ನು ಊಹಿಸಿಕೊಳ್ಳಬಹುದು.

ಶ್ರೀ ಎಸ್. ಕರಿಯಪ್ಪ.—ವಿ. ವಿ. ಕಲ್ಯಾಣಿ ಅವರು ಮಾಡಿರತಕ್ಕದ್ದು ಎಂ. ಎಸ್ ಸಿ. ಬಾಟನಿ ಅಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ನೋಟೀಸ್.

ಶ್ರೀ ಎಸ್. ಕರಿಯಪ್ಪ.—ಎಂ. ಎಸ್. ಸಿ. ಬಾಟನಿ ಮಾಡಿರುವವರು ಜೀವಶಾಸ್ತ್ರಕ್ಕೆ ಸಂಬಂಧ ಪಟ್ಟ ಮೀನಿನ ಇಲಾಖೆಯ ಮುಖ್ಯ ಅಧಿಕಾರವನ್ನು ವಹಿಸಿಕೊಳ್ಳಬೇಕೆಂಬ ನಿರ್ಧಾರಮಾಡಿರುವುದಕ್ಕೆ ನಿಮಗೆ ಇದ್ದ ಕಾರಣ ಯಾವುದು ?

ಶ್ರೀ ಎಚ್. ಎಸ್. ರುದ್ರಪ್ಪ.—ಅವರು ಮೊದಲೇ ಆ ಇಲಾಖೆಯಲ್ಲಿ ಇದ್ದರು. ಅವರೇ seniormost ಎಂದು ಕಂಡುಬಂದದ್ದರಿಂದ ಅವರನ್ನು ಮುಖ್ಯ ಅಧಿಕಾರಿಗಳನ್ನಾಗಿ ಮಾಡಲಾಗಿದೆ. ಇಲ್ಲಿ ಕ್ವಾಲಿಫಿಕೇಷ್ಟ್ ಬರುವುದಿಲ್ಲ.

Sri J. SHAMSUDDIN.—May I know whether Sri Kalyani has long experience of fisheries and he was deputed to foreign countries to make a special study of this subject ?

Sri H. S. RUDRAPPA.—I have already said that he was the seniormost officer and he was working in the Fisheries Department for a long time.

Sri C. S. HULKOTI.—Has he made a special study of this subject in a foreign country ?

Sri H. S. RUDRAPPA.—Yes.

Sri K. S. SURYANARAYANA RAO.—Is the Government in order in publishing the names of the officers ?

Mr. SPEAKER.—Yes. There is nothing uncommon about it.

Dr. T. PARTHASARATHY.—May I know from the Hon'ble Minister whether Sri Kalyani had technical training and was doing a technical job in the Fisheries Department or secretariat work ?

Sri H. S. RUDRAPPA.—He was doing technical work.

Sri B. N. BORANNA GOWDA.—Was Dr. H. D. R. Iyengar also specially deputed to a foreign country to study this subject ?

Sri H. S. RUDRAPPA.—He is also a foreign—trained man.

Dr. A. R. KARISIDDAPPA.—Since how many years is Sri Kalyani working in the Fisheries Department ?

ಶ್ರೀ ಎಚ್. ಎಸ್. ರುದ್ರಪ್ಪ.—ನನಗೆ ಕರಾರುವಾಕ್ಕಾಗಿ ಗೊತ್ತಿಲ್ಲ. ಅಂತೂ ಬಹಳ ವರ್ಷಗಳಿಂದ ಅಲ್ಲೇ ಇದ್ದಾರೆ. ಅವರ ಸರ್ವಿಸ್ಸಿನ ಪ್ರಾರಂಭದಿಂದಲೂ ಆ ಇಲಾಖೆಯಲ್ಲೇ ಇದ್ದಾರೆ.

Issue of Liquor Permits to addicts in Hassan District

Q.—80. **Sri B. N. BORANNA GOWDA** (Belur).—

Will the Government be pleased to state.—

(*a*) the number of permits issued during the year 1956-57 for the addicts in Hassan District on medical grounds to purchase brandy and arrack ;

(*b*) the number of such permits issued during the past three years ;

(*c*) the total number of permits at present ;

(*d*) whether it is a fact that these addicts are transporting brandy and arrack very often with the help of the Police with a view to earn money ?

A.—**Sri MOHAMED ALI** (Minister for Excise and Rural Industries).—

(*a*)	1. Brandy	... ...	26
	2. Arrack	... ...	Nil
(*b*)	1953-54	... ...	22
	1954-55	... ...	28
	1955-56	... ...	27
(*c*)	20.		
(*d*)	No.		

Sri B. N. BORANNA GOWDA.—The reply says that the total number of permits issued at present is 20 whereas the number of permits issued during the past three years has been given as 77. Which figure is correct ?

Mr. SPEAKER.—I have carefully read the reply and I have come to the conclusion that the figure 20 refers to 1957-58.

Sri B. N. BORANNA GOWDA.—How many permits of this kind have been issued for the last four years ?

(No reply)

Sri B. N. BORANNA GOWDA.—Does the Government intend giving any more permits to these addicts ?

Sri MOHAMED ALI.—There is no question of enhancing thenumber of addicts.

Sri K. S. SURYANARAYANA RAO.—What is the total quantity of liquor supplied under these permits in this district ?

Sri MOHAMED ALI.—I have not got that detail with me.

Sri K. S. SURYANARAYANA RAO.—Has it come to the knowledge of Government that unprecedented quantities of Arrack and Brandy have been supplied to this district ?

Sri MOHAMED ALI.—I do not think so.

Dr. A. R. KARISIDDAPPA.—What is the maximum quantity that can be supplied to an addict on medical advice?

Sri MOHAMED ALI.—I think it is four bottles per month.

ಶ್ರೀ ಇ. ನಾರಾಯಣಗೌಡ.—26 ಜನಕ್ಕೆ ಬ್ರಾಂದಿ ಲೈಸೆನ್ಸ್ ಕೊಟ್ಟಿದ್ದೀರಿ, ಇದರಲ್ಲಿ ಕಾಂಗ್ರೆಸ್‌ನವರು ಎಷ್ಟು ಜನ ಇದ್ದಾರೆ ?

(No answer)

3 P.M.

ಶ್ರೀ ಎಸ್. ಶರಣಗೌಡ.—ಈಗ ಮೂರುವರ್ಷಗಳಿಂದ ಯಾವ ಮನುಷ್ಯನಿಗೆ ಡಾಕ್ಟರಿಂದ ಇರಾಜಿಗಾಗಿ ಔಷಧಿ ರೂಪವಾಗಿ ಕೊಟ್ಟಿದ್ದಾರೆ, ಮೂರು ವರ್ಷಗಳಿಂದ ಕುಡಿಯುತ್ತಿರುವವನು ಮತ್ತೆ ಗುಣಹೊಂದಿಲ್ಲ ಎಂದು ಡಾಕ್ಟರಿಂದ ಸರ್ಟಿಫಿಕೇಟ್ ಪಡೆಯುತ್ತಾನೆಯೇ ?

Sri MOHAMED ALI.—These permits are being issued every year on the basis of a medical certificate.

Sri S. SHARANGOWDA.—Is it not the duty of the Government to see whether those persons given permits on ground of health, recover or not ?

Mr. SPEAKER.—The question relates to "the number of permits issued during the year 1956-57 for the addicts in Hassan District on medical grounds to purchase brandy and arrack". It does not pertain to cases of recovery.

ಶ್ರೀ ಎಸ್. ಶರಣಗೌಡ.—ಯಾವಾಗ ಅವರಿಗೆ ಪರ್ಮಿಟ್ಟುಗಳನ್ನು ಕೊಡುತ್ತೀರೋ, ಕುಡಿಯುವುದು ಕಡಮೆಯಾಗಿ Zero pointಗೆ ಬರಬೇಕು. ಇದರ ಸಲುವಾಗಿ ಏನು ಮಾಡಿದ್ದೀರಿ ?

Mr. SPEAKER.—It is a matter of opinion.

Sri V. P. DEENADAYALU NAIDU.—Does this procedure mean that these addicts should have intoxicants as long as they live ?

Mr. SPEAKER.—That depends on medical advice.

Sri V. P. DEENADAYALU NAIDU.—What is the period for which these addicts are supplied with brandy and arrack ?

Mr. SPEAKER.—That is a question to which probably Dr. Parthasarathy would be able to reply. (*Laughter*).

Dr. T. PARTHASARATHY.—Will the Hon'ble Minister enlighten me as to what an 'addict' means ?

Mr. SPEAKER.—That is outside the scope of this question.

Dr. T. PARTHASARATHY.—There is so much of ambiguity about the word 'addict', Sir. He can be a graded addict; the 'addict' can be cured and I believe that, in a way, if the permits are issued indefinitely, it would work against a cure. Of course, no Doctor will issue permits purely on medical grounds, except out of sympathy to its cause (*Laughter*). But the addict can very well be cured also, by withdrawing the permit.

Mr. SPEAKER.—All these are matters of opinion.

Dr. T. PARTHASARATHY.—I wish to know on what basis the permits are given ?

Mr. SPEAKER.—An answer to it must be given by doctors like you. The Government can only trust the doctor and accept his advice. How can a poor Minister answer your question? (*Laughter*).

Sri B. N. BORANNA GOWDA.—Will the Government discontinue the procedure of issuing permits hereafter, Sir ?

Sri M. MOHAMED ALI.—The permits are givenon considerations of health. So the issue of permits depends on medical opinion.

Sri G. DUGGAPPA.—As a supplementary to para (a) of the question, may I ask, Sir, whether the permits are issued without any certificate from a medical authority also, Sir.

Sri MOHAMED ALI.—No, Sir.

ಶ್ರೀ ಎ. ಮುನಿಯಪ್ಪ.—ಪರ್ಮಿಟ್‌ಗಳನ್ನು ಕೊಡುವಾಗ ಯಾವ ಅರ್ಹತೆಗಳಿದ್ದರೆ ಕೊಡುತ್ತೀರಿ ?

ಅಧ್ಯಕ್ಷರು.—"Addicts" ಎಂದರೆ ಕುಡಿಯುವ ಚಟವಿದ್ದವರಿಗೆ ಕೊಡುತ್ತೇವೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ.

Sri K. S. SURYANARAYANA RAO.—Is it the opinion of Government that addicts are those who are under medical advice ?

Mr. SPEAKER.—It is outside the scope of this question.

ಶ್ರೀ ಡಿ. ಟಿ. ಸೀತಾರಾಮರಾವ್.—ಅಭ್ಯಾಸವಿರುವವರಿಗೆ ಕೊಡುತ್ತಾರೆಯೇ ಅಥವಾ ಡಾಕ್ಟರ್ ಸರ್ಟಿಫಿಕೇಟ್ ಕೊಟ್ಟರೆ ಹೊಸಬರಿಗೂ ಕೊಡುತ್ತಾರೆಯೇ ?

ಅಧ್ಯಕ್ಷರು.—ಉತ್ತರದಲ್ಲಿ addicts ಎಂದಿದೆ. Addicts ಎಂದರೆ ಅಭ್ಯಾಸವಿರುವವರು ಎಂದು ಅರ್ಥವಾಗುತ್ತದೆ.

ಶ್ರೀ ಡಿ.ಟಿ. ಸೀತಾರಾಮರಾವ್.—1955-56ರಲ್ಲಿ 27 ಜನರಿಗೆ ಪರ್ಮಿಟ್ ಕೊಟ್ಟಿದೆ ಎಂದು ಕಂಡು ಬರುತ್ತದೆ, ಇದನ್ನು ಕುಡುಕರಿಗೆ ಕೊಡುತ್ತಿದ್ದೀರೋ ಅಥವಾ ಹೊಸದಾಗಿ ಕುಡಿಯುವುದನ್ನು ಕಲಿಯತಕ್ಕವರಿಗೆ ಕೊಡುತ್ತೀರೋ ?

Sri MOHAMED ALI.—It means addicts naturally.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಕುಡಿಯುವ ಅಭ್ಯಾಸವಿರುವವರಿಗೆ ಪರ್ಮಿಟ್ ಕೊಡುತ್ತಾರೆಂದು ಅಪ್ಪಣೆಯಾಗಿದೆ. 'ಫ್ಲೂ' ಬಂದ ಕಾರಣ ಜನಗಳಿಗೆ ಕುಡಿಯುವ ಅಭ್ಯಾಸವಾಗಿಲ್ಲವೇ ?

Mr. SPEAKER.—Order, Order.

Sri T. TAREGOWDA.—Are there permit-holders who are relatives of excise contractors, Sir ?

Sri MOHAMED ALI.—Government is not aware of any such case.

Sri ANNA RAO GANAMUKHI.—May I know whether there is an increase or a decline in the number of addicts year by year ?

ಅಧ್ಯಕ್ಷರು.—1953-54ರಲ್ಲಿ 22, 1954-55ರಲ್ಲಿ 28 ಮತ್ತು 1955-56ರಲ್ಲಿ 27 ಪರ್ಮಿಟ್‌ಗಳನ್ನು ಕೊಟ್ಟಿದೆ ಎಂದು ಉತ್ತರದಲ್ಲಿಯೇ ತಿಳಿಸಿದ್ದಾರೆ.

Sri ANNA RAO GANAMUKHI.—May I know whether any case has been registered against addicts for transporting brandy and arrack to outside places, Sir ?

Mr. SPEAKER.—Question time is over.

Business of the House.

Sri S. NIJALINGAPPA (Chief Minister).—Before we proceed with the next item in the agenda, I would like to make a suggestion to the House. Yesterday, we had three Demands under discussion and we are continuing them today. If this state of affairs continue, I am afraid it will be very hard for the members to express themselves on all the Demands that are being made. I would appeal to the members to offer their remarks in such a way that on a particular day, we may be able to finish the Demands prescribed for that day.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಈಗ ಸಭಾನಾಯಕರು ಡಿಮ್ಯಾಂಡುಗಳ ಬಗ್ಗೆ ಒಂದು ವಿಷಯವನ್ನು ಅಪ್ಪಣೆ ಕೊಡಿಸಿದರು. ಆದರೆ ಡಿಮ್ಯಾಂಡುಗಳ ವಿಷಯದಲ್ಲಿ ಯಾವ ರೀತಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ option ವಿರೋಧಪಕ್ಷದವರಿಗೆ ಇರಬೇಕು ಎಂದು ನಿನ್ನೆಯ ದಿನ ಮಾನ್ಯ ಅಧ್ಯಕ್ಷರೂ ಕೂಡ ಅಪ್ಪಣೆ ಕೊಡಿಸಿದರು. ಈ ಡಿಮಾಂಡುಗಳಲ್ಲಿ ಯಾವಯಾವದರ ಮೇಲೆ ಎಷ್ಟೆಷ್ಟು ಚರ್ಚೆಯಾಗಬೇಕು ಎನ್ನುವುದನ್ನು ತೀರ್ಮಾನಮಾಡುವಾಗ ಆ ವಿಷಯವನ್ನು ವಿರೋಧಪಕ್ಷದವರಿಗೆ ಬಿಡತಕ್ಕದ್ದು ನೂಕ್ತ. ಈಗ 12 ದಿನಗಳು ಮಾತ್ರ ಡಿಮಾಂಡುಗಳಿಗೆ ಕೊಟ್ಟಿರುವುದರಿಂದ ಕಾಲ ಬಹಳ ಕಡಮೆಯಾಗಿ ಅದರಿಂದ ನಮಗೆ ಸ್ವಲ್ಪ ನಷ್ಟವಾಗುತ್ತದೆ ; ಸರ್ಕಾರದ ಕಡೆಯವರಿಗೆ ಏನೂ ನಷ್ಟವಾಗುವುದಿಲ್ಲ. ನಮಗಿರುವ ಅವಕಾಶದಲ್ಲಿ ಎಷ್ಟುಮಟ್ಟಿಗೆ ಚರ್ಚೆ ಮಾಡುವುದಕ್ಕೆ ಸಾಧ್ಯವೋ ಅಷ್ಟು ಮಾತ್ರ ಆಗುತ್ತದೆ. ಈಗ ನಮ್ಮ ಮುಂದಿರುವ ಡಿಮ್ಯಾಂಡುಗಳು, Police, Administration of Justice and Jails—ಇವುಗಳಿಗೆ ಸಂಬಂಧಪಡುತ್ತವೆ. ಇವು ದೇಶದ ನೆಮ್ಮದಿಗೆ ಸಂಬಂಧಪಟ್ಟಂಥ ದೊಡ್ಡ ವಿಷಯಗಳು. ಇವುಗಳ ಮೇಲೆ ಅನೇಕ ಸದಸ್ಯರು ಮಾತನಾಡುವ ಅಭಿಲಾಷೆಯನ್ನು ಹೊಂದಿರುತ್ತಾರೆ. ಆದುದರಿಂದ ಈ ದಿನ ಇವುಗಳ ಮೇಲೆ ಚರ್ಚೆಯನ್ನು ನಡೆಸಿ, General Administration ಡಿಮ್ಯಾಂಡನ್ನು ನಾಳೆಯ ದಿನ ತೆಗೆದುಕೊಳ್ಳಬೇಕು ಎಂದು ಸೂಚಿಸುತ್ತೇನೆ. ನಾಳೆಯಿಂದ ಡಿಮ್ಯಾಂಡುಗಳನ್ನು ತೆಗೆದುಕೊಳ್ಳುವಾಗ ನಮ್ಮ ವಿರೋಧಪಕ್ಷದ ನಾಯಕರೊಂದಿಗೆ ಸಮಾಲೋಚನೆ ಮಾಡಿ ಯಾವ ಯಾವ ಡಿಮಾಂಡನ್ನು ಯಾವ ಯಾವ ದಿನ ತೆಗೆದುಕೊಳ್ಳಬೇಕು ಎಂದು ತೀರ್ಮಾನಿಸಿ, ಅನುಕೂಲವನ್ನು ಕಲ್ಪಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ವಿರೋಧಪಕ್ಷದವರಲ್ಲಿ ಅನೇಕ ಮಂದಿ ಸದಸ್ಯರು ನಿನ್ನೆಯ ದಿನ ಸಭೆಯ ಮುಂದೆ ಮುಂಡಿಸಿದ ಡಿಮ್ಯಾಂಡುಗಳ ಮೇಲೆ ಮಾತನಾಡಬೇಕಾಗಿರುವುದರಿಂದ, ಒಬ್ಬೊಬ್ಬರಿಗೆ 10-15 ನಿಮಿಷಗಳ ಕಾಲ ಕೊಟ್ಟರೂ ಇಡೀ ದಿನವೆಲ್ಲ ಚರ್ಚೆ ನಡೆಯಬೇಕಾಗುತ್ತದೆ. ಈ ಕಾರಣದಿಂದ General Administration ಮೇಲೆ ಚರ್ಚೆಯನ್ನು ನಾಳೆ ದಿವಸ ತೆಗೆದುಕೊಂಡು ಈ ದಿವಸ ಪೂರ್ತಿಯಾಗಿ ಈ ಮೂರು ಡಿಮ್ಯಾಂಡುಗಳ ಮೇಲೆ ಚರ್ಚೆಯಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಸಭಾನಾಯಕರನ್ನು ತಮ್ಮ ಮೂಲಕ ಕೇಳಿಕೊಳ್ಳುವುದರ ಜೊತೆಗೆ, ಅಧ್ಯಕ್ಷರೂ ನಮಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ; ಮತ್ತು ನಮ್ಮ ಪಕ್ಷದ ನಾಯಕರನ್ನು consult ಮಾಡಿ ನಾಳೆದ್ದುರಿಂದ ಡಿಮ್ಯಾಂಡುಗಳನ್ನು ಚರ್ಚೆಗೆ ತೆಗೆದುಕೊಳ್ಳುವ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು ಎಂದು ಹೇಳುತ್ತೇನೆ.